ಶ್ರೀ ಹೆಚ್. ಕೆ. ಸಿದ್ದಯ್ಯ.—ಡಿಪ್ರೆಸ್ಡ್‌ಕ್ಲಾಸ್ ಜನರಿಗೆ ಹೆಂಚುಗಳನ್ನು ಕೊಡುವುದಕ್ಕೆ ರೆವೆನ್ಯೂ ಇನ್‌ಸ್ಪೆಕ್ಟರನ್ನು ಕೇಳಬೇಕೆಂದು ಅಪ್ಪಣೆಮಾಡಿದ್ದಾರೆ, ಕಾರಣವೇನು?

ಶ್ರೀ ಕೆ. ಹನುಮಂತಯ್ಯ.—ಆ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

---

*Licences to run petrol bunks in the State.*

*Q.*—97. Sri B. RACHIAH (Yelandur—Scheduled Castes).—

Will the Government be pleased to state:—

(*a*) the names of persons who have been granted licences to run petrol bunk in the State from 1948 up-to-date (talukwar and communitywar information may kindly be given);

(*b*) the total number of applications received from 1948 (yearwar information may kindly be given);

(*c*) the licensing authority and the conditions under which the licences were issued;

(*d*) the names of persons whose licences have been withdrawn from 1948?

*A.*—Sri A. G. RAMACHANDRA RAO (Minister for Law and Education).—

(*a*) to (*d*) This is a Central subject dealt with by the Department of Mines and Explosives under the Central Government. Information is, therefore, not available.

ಶ್ರೀ ಬಿ. ರಾಚಯ್ಯ.—ಲೈಸೆನ್ಸ್ ಕೊಡುವಾಗ ಸಂಸ್ಥಾನದ ಸರ್ಕಾರದ ಅಭಿಪ್ರಾಯವನ್ನು ಕೇಳುತ್ತಾರೆಯೆ?

Sri A. G. RAMACHANDRA RAO.—It is left to them.

ಶ್ರೀ ಬಿ. ರಾಚಯ್ಯ.—ಇದುವರೆಗೆ ಕೇಳಿಲ್ಲವೆ?

Sri A. G. RAMACHANDRA RAO.—I want notice.

ಶ್ರೀ ಬಿ. ರಾಚಯ್ಯ.—ಹಾಗಾದರೆ ಮಹಜರು ಕ್ರಮ ನಡೆಸುವವರಾರು?

Sri A. G. RAMACHANDRA RAO.—The question is vague—whether it was done, etc.

ಶ್ರೀ ಮುಸ್ಕ ಗೋವಿಂದರೆಡ್ಡಿ.—ಪೆಟ್ರೋಲ್ ಬಂಕುಗಳಿಂದ ಒಳ್ಳೆಯ ಆದಾಯ ಬರುತ್ತದಲ್ಲವೆ?

Sri A. G. RAMACHANDRA RAO.—I have no idea.

ಶ್ರೀ ಮುಲ. ಗೋವಿಂದರೆಡ್ಡಿ.—ಇವುಗಳನ್ನು ಮುನಿಸಿಪಾಲಿಟಿಗಳೂ ಕಾರ್ಪೊರೇಷನ್‌ಗಳೂ ನಡೆಸುವುದು ಸೂಕ್ತವಲ್ಲವೆ?

Sri A. G. RAMACHANDRA RAO.—I have no opinion at present.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆ ರೀತಿ ಮಾಡುವುದರಿಂದ ಮುನಿಸಿಪಾಲಿಟಿಗಳಿಗೂ ಕಾರ್ಪೊರೇಷನ್‌ಗಳಿಗೂ ಇರುವ ಹಣದ ಅಭಾವನೀಗಲು ಅನುಕೂಲವಾಗುವುದರಿಂದ, ಹೀಗೆ ಸೂಚನೆಮಾಡುವುದು ಒಳ್ಳೆಯದಲ್ಲವೇ?

Sri A. G. RAMACHANDRA RAO.—It will be considered.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪೆಟ್ರೋಲ್ ಬಂಕುಗಳಿಗೆ ಲೈಸೆನ್ಸ್ ಕೊಡುವುದು ಕೇಂದ್ರ ಸರ್ಕಾರವೆಂದು ಹೇಳಿದ್ದೀರಿ. ಅವುಗಳನ್ನಿಡುವ ಸ್ಥಳಗಳು ಮೈನೂರು ಸರ್ಕಾರಕ್ಕೊಳಪಟ್ಟಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಸ್ಥಳಗಳಿಗೆ ಗ್ರೌಂಡ್‌ರೆಂಟ್ ಹಾಕಿದ್ದೀರಾ?

Sri A. G. RAMACHANDRA RAO.—I want notice.

ಶ್ರೀ ಎಂ. ಚಿಕ್ಕಲಿಂಗಯ್ಯ.—ಗ್ರೌಂಡ್‌ರೆಂಟ್ ಮತ್ತು ಸೇಲ್ಸ್ ಟ್ಯಾಕ್ಸ್ ಕೊಡಬೇಕಾಗುವ ಸಂದರ್ಭಗಳು ಸರ್ಕಾರದ ಗಮನಕ್ಕೆ ಬಂದಿವೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಂಥ ಸಂದರ್ಭಗಳನ್ನು ದಯವಿಟ್ಟು ವಿಚಾರಣೆ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.

---

*Committees constituted under the Minimum Wages Act.*

*Q.*—99. Sri B. MADHAVACHAR (Bhadravati).—

Will the Government be pleased to state:—

the number of committees constituted under the Minimum Wages Act for fixing minimum wages in the industrial concerns in the State?

*A.*—Sri A. G. RAMACHANDRA RAO (Minister for Law and Education).—

None.

ಶ್ರೀ ಬಿ. ಮಾಧವಾಚಾರ್.—ಸರ್ಕಾರಿ ಕೈಗಾರಿಕಾ ಸಂಸ್ಥೆಗಳಲ್ಲಿ ವಯಸ್ಕರಾದ ಗಂಡಸರು ಮತ್ತು ಹೆಂಗಸರು ಕೆಲಸಗಾರರಿಗೆ ಎಷ್ಟು ಕೂಲಿ ಕೊಡುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವ ಯಾವ ಕೈಗಾರಿಕೆಗಳಲ್ಲಿ ಎಷ್ಟೆಷ್ಟು, 'ಮಿನಿಮಂ ವೇಜಸ್', ಎಂಬುದನ್ನು ಇಲ್ಲಿ ಕೊಟ್ಟಿದೆ.

ಶ್ರೀ ಬಿ. ಮಾಧವಾಚಾರ್.—ಇನ್ನೂ ಆ ರೀತಿ ಮಾಡಿಲ್ಲ. ಈಗ ಏನು ಕೊಡುತ್ತಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಷೆಡ್ಯೂಲಿನಲ್ಲಿ ಆ ದರಗಳನ್ನು ಕೊಟ್ಟಿದೆ. ಇಂಡಿಯಾ ಸರ್ಕಾರದವರು ಗೊತ್ತುಮಾಡಿದ್ದಾರೆ. ಅದರ ಪ್ರಕಾರ ಕೊಡುತ್ತಾರೆ.

Sri B. MADHAVACHAR.—Will this Minimum Wages Act apply both to private and Government owned industries?